ಸರ್ಕಾರ ಉತ್ತರ ಹೇಳಬೇಕು ಮತ್ತು ಇದಕ್ಕೆ ಕ್ರಮ ತೆಗೆದುಕೊಳ್ಳಬೇಕು ಇವತ್ತಿನ ಐ ಟಿ ಯುಗದಲ್ಲಿ, ಎಲ್ಲಾ ಮಕ್ಕಳೂ ನಾನೇನೋ ಇಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕು ಎಂದು ಬಯಸುತ್ತಾರೆ ಇಂಜಿನಿಯರ್ ಮತ್ತು ಡಾಕ್ಟರ್ ಕಥೆ ಈಗ ಮುಗಿಯುತ್ತಿದೆ, ಬಡವರೆಲ್ಲಾ ಅದನ್ನು ಈಗ ಓದುವುದಕ್ಕಾಗುವುದಿಲ್ಲ ಆದರೂ ಬೇರೆ ಏನಾದರೂ ಐ ಟಿ ಕಂಪ್ಯೂಟರ್ ಗಿಂಪ್ಯೂಟರ್ ಓದೋಣ ಎಂದರೆ ಅದಕ್ಕೂ ಈಗ ಬಹಳ ತೊಂದರೆಯಾಗುತ್ತಿದೆ 319 ಜನ ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಇಡೀ ತಾಲ್ಲೂಕಿನಲ್ಲಿ ಪಿಯುಸಿ ಸೈನ್ಸ್ ಇಲ್ಲ ದಯವಿಟ್ಟು ಅಲ್ಲಿ ಒಂದು ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿಕೊಡಬೇಕು ಪಕ್ಕದ ತಾಲ್ಲೂಕಿನಲ್ಲಿ ಸೇರಿಕೊಂಡರೂ ಕೂಡ ಅಲ್ಲಿ ಹಾಸ್ಟಲ್‌ಗೆ ಪ್ರವೇಶ ಕೊಡುವುದಿಲ್ಲ ಸಾಗರ್ ತಾಲ್ಲೂಕಿನವರಿಗೆ ಇಲ್ಲವೆಂದು ಹೇಳುತ್ತಾರೆ, ಹೊಸನಗರದವರಿಗೆ ಇಲ್ಲವೆಂದು ಹೇಳುತ್ತಾರೆ, ಶಿವಮೊಗ್ಗದವರಿಗೆ ಕೇಳಿದರೆ ಇಲ್ಲವೆಂದು ಹೇಳುತ್ತಾರೆ ತೀರ್ಥಹಳ್ಳಿಯಲ್ಲಿ ಕೇಳಿದರೆ ನಿಮ್ಮ ತಾಲ್ಲೂಕಿನವರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಇಲ್ಲ, ನಿಮ್ಮ ತಾಲ್ಲೂಕಿನವರಿಗೆ ಎಲ್ಲಿಂದ ತರಲಿ ಎಂದು ಹೇಳುತ್ತಾರೆ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆಯಾಗಿದೆ ಎಂದು ಹೇಳುತ್ತಿದ್ದೇನೆ ಬೇರೆ ತಾಲ್ಲೂಕುಗಳಿಗೆ ಹೋಗಿ ಸೈನ್ಸ್ ವಿಷಯ ತೆಗೆದುಕೊಂಡು ಓದಲಿಕ್ಕೆ ಹೋದರೂ ಸಹ ಯಾವುದೇ ಫೆಸಿಲಿಟಿ ಅಲ್ಲಿ ಸಿಗುವುದಿಲ್ಲ ಅದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಏನು ಕ್ರಮ ತೆಗೆದುಕೊಳ್ಳುತ್ತೀರಿ, ಏನು ಸಹಾಯ ಮಾಡುತ್ತೀರಿ? ಎಂದು ಹೇಳಬೇಕು

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಹೊಸನಗರ ತಾಲ್ಲೂಕಿನ ಒಂದು ಭಾಗವನ್ನು ನಾನೂ ಕೂಡ ಪ್ರತಿನಿಧಿಸುತ್ತಿದ್ದೇನೆ ಇಡೀ ತಾಲ್ಲೂಕಿನಲ್ಲಿ ಪಿಯುಸಿಗೆ ಸೈನ್ಸ್ ಸೆಕ್ಷನ್ ಇಲ್ಲ ಮಿತವ್ಯಯ ಎನ್ನುವ ನೆಪದಲ್ಲಿ ಬಡವರ ಮಕ್ಕಳು ಇವತ್ತು ಸೈನ್ಸ್ ಪಿಯುಸಿಯನ್ನೂ ಓದಲಿಕ್ಕೆ ದುರ್ಗತಿ ಯಾಗುವುದಾದರೆ ಇದಕ್ಕೆ ಅರ್ಥವಿಲ್ಲ ಅಲ್ಲಿರತಕ್ಕಂತಹ ಜೂನಿಯರ್ ಕಾಲೇಜುಗಳಿಗೆ ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡುವ ಹಾಗೆ ದಯಮಾಡಿ ಆದೇಶ ಕೊಡಬೇಕು

ಶ್ರೀ ಹೆಚ್ ಹಾಲಪ್ಪ ಉಪನ್ಯಾಸರು ಇಲ್ಲವೆಂದು ಹಾಲಿ ನಡೆಯುತ್ತಿದ್ದ ಪಿಯುಸಿ ಕಾಲೇಜ್ ಮುಚ್ಚಿದ್ದೀರಿ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಇದನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಡೈರೆಕ್ಟರ್ ಅವರನ್ನು ಕರೆಸಿ ಆದೇಶ ಕೊಡಿಸುತ್ತೇನೆ.

18 ವಿಷಯ ಸಂಕಷ್ಟಕ್ಕೊಳಗಾದ ದಲಿತ ಕುಟುಂಬಕ್ಕೆ ಪರಿಹಾರ ಒದಗಿಸುವ ಕುರಿತು

ಶ್ರೀ ಎಂ ವೈ ಪಾಟೀಲ್ (ಅಫಜಲ್‌ಪುರ) ಮಾನ್ಯ ಅಧ್ಯಕ್ಷರೆ, ಕೆ ಗ್ರಾಮದಿಂದ ಚಿಕ್ಕಮಗಳೂರಿಗೆ ಕೆಲಸಕ್ಕಾಗಿ ನಮ್ಮ ಒಂದು ದಲಿತ ಕುಟುಂಬ ಹೋಗಿತ್ತು ಅವರ ಹೆಸರು ಶೋಭೆ ಮತ್ತು ಕಲಾವತಿ ಎನ್ನುವವರು ಸಿಡಿಲು ಬಡಿದು ಕಾಲು ಕಳೆದುಕೊಂಡಿದ್ದಾರೆ ಅವರಿಗೆ ಸರ್ಕಾರದಿಂದ ಯಾವುದೇ ಧನಸಹಾಯವಾಗಲಿ,

ಪರಿಹಾರವಾಗಲಿ ಸಿಗಲಿಲ್ಲ ಮತ್ತು ಚಿಕಿತ್ಸೆ ಕೂಡ ಆಗಿಲ್ಲ ಅವರನ್ನು ಬಿಜಾಪುರ ಬಿಎಲ್‌ಡಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಅವರು ಸಾವು-ನೋವಿನಲ್ಲಿ ಜೀವನ ಕಳೆಯುತ್ತಿದ್ದಾರೆ ಅವರಿಗೆ ಸರ್ಕಾರದ ಪರಿಹಾರ ಸಿಗಬೇಕೆನ್ನುವುದು ನನ್ನ ಇಚ್ಛೆ ಇವರು ದಲಿತ ಕುಟುಂಬದವರಾಗಿದ್ದು ಅವರಿಗೆ ಯಾವುದೇ ಆಸರೆ ಇಲ್ಲ ಆಶ್ರಯ ಸಮಿತಿ ಕಡೆಯಿಂದ ಅವರಿಗೆ ಮನೆ ಕೂಡ ಸಿಗಬೇಕೆಂಬುದು ನನ್ನ ಇಚ್ಛೆಯಾಗಿದೆ ಸರ್ಕಾರ ಅದಕ್ಕೆ ಸ್ಪಂದಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ.

19 ವಿಷಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಟೆಕ್ವಿಪ್ ಪ್ರೋಗಾಂನ್ನು ಜಾರಿಗೊಳಿಸುವ ಬಗ್ಗೆ

ಶ್ರೀ ಚರಂತಿಮರ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ, ಈ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಟೆಕ್ವಿಪ್ ಎನ್ನುವಂತಹ ಒಂದು ಪ್ರೋಗ್ರಾಮನ್ನು ದೇಶದ ತುಂಬೆಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಜಾರಿಗೊಳಿಸುತ್ತಿದ್ದಾರೆ ಈಗಾಗಲೇ ಆ ಸೌಲಭ್ಯವನ್ನು ಅನೇಕ ರಾಜ್ಯಗಳ ಇಂಜಿನಿಯರಿಂಗ್ ಕಾಲೇಜುಗಳು ಪಡೆದುಕೊಂಡಿವೆ ಆದರೆ, ಟೆಕ್ವಿಪ್ ಎಂದರೆ, ಟೆಕ್ನಿಕಲ್ ಎಜ್ಯುಕೇಷನ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಂ ಎಂದು ಆದರೆ ಅದು ನಮ್ಮ ರಾಜ್ಯದಲ್ಲಿ ಇನ್ನೂ ಕೂಡ ಜಾರಿಗೆ ಬರುತ್ತಿಲ್ಲ ಈಗಾಗಲೇ ಅನೇಕ ರಾಜ್ಯಗಳು ಈ ಸೌಲಭ್ಯವನ್ನು ಪಡೆದುಕೊಂಡಿರುವಾಗ ನಮ್ಮ ರಾಜ್ಯ ಏಕೆ ಇದರಿಂದ ವಂಚಿತವಾಗಬೇಕು? ನಮ್ಮಲ್ಲಿರುವಂತಹ ಇಂಜಿನಿಯರಿಂಗ್ ಕಾಲೇಜುಗಳಿಗೂ ಕೂಡ ಆ ಸೌಲಭ್ಯ ಸಿಗಬೇಕು ಈಗಾಗಲೇ ನ್ಯಾಷನಲ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಯೂನಿಟ್ (ಎನ್‌ಪಿಐಯು) ಎನ್ನುವಂತಹ ಸಂಸ್ಥೆ ಮುಖಾಂತರ ನಾಲ್ಕು ಲೀಡ್ ಕಾಲೇಜುಗಳು ಮತ್ತು 11 ನೆಟ್‌ವರ್ಕ್ ಕಾಲೇಜುಗಳಿಂದು ಸೆಲೆಕ್ಷನ್ ಆಗಿವೆ ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟರೆ, ಅದಕ್ಕೆ ಬಜೆಟನ್ನು ಪ್ರೊವೈಡ್ ಮಾಡಿದರೆ, ನಮ್ಮ ರಾಜ್ಯದಲ್ಲಿ ಕೂಡ ಆ ಯೋಜನೆಯನ್ನು ಜಾರಿಗೊಳಿಸಬಹುದು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ 2003ಕ್ಕೆ ಪ್ರಾರಂಭವಾಗುವ ಯೋಜನೆ, 2007ಕ್ಕೆ ಮುಕ್ತಾಯವಾಗಬೇಕು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ ಇನ್ನು ಉಳಿದಿರುವಂತಹ ಮೂರುವರೆ ವರ್ಷದಲ್ಲಿ ಇದನ್ನು ಜಾರಿಗೊಳಿಸುವುದು ಯಾವಾಗ? ಶಿಕ್ಷಣ ಮಂತ್ರಿಗಳು ಇದರ ಬಗ್ಗೆ ಬೇಗನೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನಿಮ್ಮ ಮೂಲಕ ಒತ್ತಾಯ ಮಾಡುತ್ತೇನೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ವರ್ಲ್ಡ್‌ಬ್ಯಾಂಕ್ ಏಡ್ ಅನ್ನು ಹಿಂದೆ ನಾವೆಲ್ಲಾ ಉಪಯೋಗಿಸಿಕೊಂಡಿದ್ದೇವೆ